ಸಿಸಿ ನಂಃ 2184/2021 ಪಿಡಬ್ಲ್ಯೂ-1

ದಿನಾಂಕಃ 31.05.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಸ್.ಎಸ್.ಡಬ್ಲ್ಯೂ ವಕೀಲರಿಂದಃ**

ಆರೋಪಿ ನಿಮ್ಮ ಸಂಬಂಧಿಕರಲ್ಲ ಎಂದರೆ ಅಲ್ಲ ಎನ್ನುತ್ತಾರೆ. ನಿಮಗೆ ಎಷ್ಟು ವಯಸ್ಸು ಎಂದರೆ 71 ಎನ್ನುತ್ತಾರೆ. ಆರೋಪಿತರು ನಿಮಗಿಂತ 30 ವರ್ಷ ಚಿಕ್ಕವರು ಎರಂದೆ ಹೌದು ಎಂದರೆ ಸರಿ . ನಿಮಗೂ ಹಾಗೂ ಆರೋಪಿಗೂ ಯಾವುದೇ ರೀತಿ ವ್ಯವಹಾರ ಇಲ್ಲ ಎಂದರೆ ಇದೆ ಎನ್ನುತ್ತಾರೆ. ನಿಮ್ಮ ಹಾಗೂ ಆರೋಪಿಯ ನಡುವೆ ಯಾವ ರೀತಿ ವ್ಯವಹಾರ ಇತ್ತು ಎಂದರೆ ಸಾಕ್ಷಿಯು ಆರೋಪಿತರು ಬೆಂಗಳೂರಿನಲ್ಲಿ ಟ್ರಾವೆಲ್ಸ್ ಬಿಸಿನೆಸ್ಸ್ ಮಾಡುತ್ತಿದ್ದು ಅವರ ಹತ್ತಿರ 4-5 ಇನೋವಾ ಕಾರು ಇದ್ದು ಹಾಗೂ ಮನೆಗಳು ಇದ್ದು ಹಾಗೂ ಸದರಿ ಕಾರುಗಳ ಲೆಸನ್ಸ್ ಕಟ್ಟಲು ಹಾಗೂ ಟೈರ್ ಗಳನ್ನು ಕೊಂಡುಕೊಳ್ಳುವ ಉದ್ದೇಶದಿಂದ ಮತ್ತು ಮನೆ ಖರ್ಚಿಗೆ ನನ್ನ ಹತ್ತಿರ ಹಣ ತೆಗೆದುಕೊಂಡಿರುತ್ತಾರೆ. ಸದರಿ ವಿಚಾರವನ್ನು ನಿಮ್ಮ ಪ್ರಮಾಣ ಪತ್ರದಲ್ಲಿ ಹೇಳಿರುತ್ತೀರ ಎಂದರೆ ಸಾಕ್ಷಿಯು ಸದರಿ ಪ್ರಮಾಣ ಪತ್ರದಲ್ಲಿ ದರದು ನಿಮಿತ್ತ ಎಂದು ನಮೂದಿಸಿರುತ್ತೇನೆ ಎನ್ನುತ್ತಾರೆ. ನಿಮ್ಮ ಇಬ್ಬರ ನಡುವೆ ಯಾವುದೇ ಸ್ನೇಹ ಸಂಬಂದ ಇಲ್ಲ ಎಂದರೆ ಸಾಕ್ಷಿಯು ವಿಶ್ವಾಸದಿಂದ ಇಬ್ಬರು ಎನ್ನುತ್ತಾರೆ. ನೀವು ತಾಲೂಕು ವ್ಯವಸ್ಥಾಪಕರಾಗಿ ಎಂ.ಡಿ.ಸಿ.ಸಿ ಬ್ಯಾಂಕ್ ನಲ್ಲಿ ಎಷ್ಟು ದಿನ ಕೆಲಸ ಮಾಡಿರುತ್ತೀರ ಎರಂದೆ ಸಾಕ್ಷಿಯು 2010 ಅಕ್ಟೋಬರ್ ನಿಂದ ಜುಲೈ 2014 ರ ವರೆಗೆ ಕೆಲಸ ಮಾಡಿರುತ್ತೇನೆ ಎನ್ನುತ್ತಾರೆ. ನೀವು ಮ್ಯಾನೇಜರ್ ಆದ ಕಾರಣ ಹಣಕಾಸು ವ್ಯವಹಾರವನ್ನು ಯಾವ ರೀತಿ ಮಾಡಬೇಕೆಂದು ನಿಮಗೆ ಗೊತ್ತು ಎಂದರೆ ಹೌದು ಎನ್ನುತ್ತಾರೆ. ಆದರೆ ಆರೋಪಿಗೆ ನಾನು ಹಣ ಕೊಡುವಾಗ ನಿವೃತ್ತಿ ಹೊಂದಿರುತ್ತೇನೆ ಎನ್ನುತ್ತಾರೆ. ಸದರಿ ಹಣವನ್ನು ಚಕ್ಕು ಅಥವಾ ಡಿಡಿ ಮೂಖಾಂತರ ಕೊಡಲು ತೊಂದರೆ ಇತ್ತಾ ಎಂದರೆ ಇತ್ತು ಎನ್ನುತ್ತಾರೆ. ರೈತರಿಗೆ ಸಾಲ ಕೊಡಬೇಕಾದರೆ ಯಾವ ಯಾವ ದಾಖಲಾತಿಗಳನ್ನು ಬ್ಯಾಂಕ್ ನವರು ತೆಗೆದುಕೊಳ್ಳುತ್ತಾರೆ ಎಂದರೆ ಸಾಕ್ಷಿಯು ಆರ್.ಟಿ.ಸಿ ಎನ್ನುತ್ತಾರೆ. ಸಾಲ ಪಡೆಯಬೇಕಾದರೆ ಖಾತೆ ಮಾಡಿಸಿ ನಂತರ ಕೊಡುತ್ತೀರ ಎಂದರೆ ಇಲ್ಲ

ಎನ್ನುತ್ತಾರೆ. ಎಂ.ಡಿ.ಸಿ,ಸಿ ಬ್ಯಾಂಕ್ ನಲ್ಲಿ ಆರೋಪಿ ಖಾತೆ ಹೊಂದಿದ್ದರು ಎಂದರೆ ನಾನು ಇದ್ದ ಸಮಯದಲ್ಲಿ ಅವರ ಖಾತೆ ಇತ್ತು ಎನ್ನುತ್ತಾರೆ. ಆರೋಪಿ ಖಾತೆ ಇದ್ದಾಗ ಅವರಿಗೆ ಚಕ್ಕನ್ನು ವಿತರಣೆ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಅವರ ಖಾತೆ ಇದ್ದಲ್ಲಿ ಅವರು ಪಡೆದುಕೊಂಡಿರುತ್ತಾರೆ. ನೀವು ವ್ಯವಸ್ಥಾಪಕರಾಗಿದ್ದಾಗ ನಿಮ್ಮ ಬ್ಯಾಂಕ್ ನಲ್ಲಿ ಆರೋಪಿಯು ವಾಹನ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದು ನನ್ನ ವಿಭಾಗಕ್ಕೆ ಬರುವುದಿಲ್ಲ ಎನ್ನುತ್ತಾರೆ. ಅದು ಗಮನಕ್ಕೂ ಬಂದಿರುವುದಿಲ್ಲ ಎನ್ನುತ್ತಾರೆ. ಆರೋಪಿಯಿಂದ ನೀವು ಸಾಲದ ಖಾತೆ ಮಾಡುವಾಗ ಚಕ್ಕುಗಳನ್ನು ವಿತರಣೆ ಮಾಡಿರುತ್ತಾರೇ ಎಂದರೆ ಚಕ್ಕನಲ್ಲಿ ನಮೂದು ಮಾಡಿ ಸದರಿ ನಂಬರ್ ಅನ್ನು ನಮೂದು ಮಾಡಿ ತಮ್ಮ ಬ್ಯಾಂಕ್ ನಲ್ಲಿರುವ ಕಂಪ್ಯೂಟರ್ ನಲ್ಲಿ ನಮೂದಾಗಿರುತ್ತದೆ ಎನ್ನುತ್ತಾರೆ. ನಿಮ್ಮ ಅನುಮತಿ ಇಲ್ಲದೇ ಯಾವುದೇ ಸಾಲದ ಖಾತೆಯನ್ನು ಮಾಡುವುದಿಲ್ಲ ಎಂದರೆ ಸಾಕ್ಷಿಯು ಸದರಿ ವಿಭಾಗಕ್ಕೆ ತಕ್ಕ ವ್ಯವಸ್ಥಾಪಕರು ಇರುತ್ತಾರೆ ಎನ್ನುತ್ತಾರೆ. ಸಾಲದ ಖಾತೆ ಇರುವ ವ್ಯಕ್ತಿಗೆ ಚಕ್ಕುಗಳನ್ನು ವಿತರಣೆ ಮಾಡುವಾಗ ಸದರಿ ಚಕ್ಕ ಯಾವ ಇಸವಿಯಲ್ಲಿ ವಿತರಣೆಯಾಗಿರುತ್ತದೆ ಎಂಬುದು ನಮೂದು ಇರುತ್ತದೆ ಎಂದರೆ ಹೌದು ಎನ್ನುತ್ತಾರೆ. ನಿಪಿ 1 ರಲ್ಲಿ 2010 ನೇ ಇಸವಿ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮ್ಮ ಅಧಿಕಾರ ಅವಧಿಯಲ್ಲಿ ಸಾಲದ ಭದ್ರತೆಗೆ ಕೊಟ್ಟಂತಹ ದಾಖಲಾತಿಗಳನ್ನು ನೀವು ಅಧಿಕಾರದಲ್ಲಿದ್ದಾಗ ಇಟ್ಟುಕೊಂಡಿರುತ್ತೀರಿ ಎಂದರೆ ಸಾಲದ ಮ್ಯಾನೇಜರ್ ಹತ್ತಿರ ಸದರಿ ದಾಖಲಾತಿಗಳು ಇರುತ್ತವೆ ನನ್ನ ಹತ್ತಿರ ಇರುವುದಿಲ್ಲ ಎನ್ನುತ್ತಾರೆ. ಬೆಲೆ ಬಾಳುವ ವಸ್ತುಗಳು ಅದರ ಸ್ಟ್ರಾಂಗ್ ರೋಮ್ ಯಾರ ಹತ್ತಿರ ಇರುತ್ತದೆ ಎಂದರೆ ಸಾಕ್ಷಿಯು ಕ್ಯಾಶಿಯರ್, ಪಾಸಿಂಗ್ ಆಫಿಸರ್ , ನಗದು ಗುಮಾಸ್ತರ ಇವರುಗಳ ಭದ್ರತೆಯಲ್ಲಿ ಇರುತ್ತದೆ.

<u>ಮುಂದುವರೆದ ಪಾಟೀ ಸವಾಲುಃ</u> ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.